# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿದ್ದಾಪುರ .

**ಸಿ .ಸಿ. ನಂ. 165/2026**

| **ಪಿರ್ಯಾದಿಃ** | | **ಆರೋಪಿಃ** |
|---|---|---|
| ರಾಜ್ಯದ ಪರ | **ವಿರುದ್ಧ** | ಕೇಶವ ತಂದೆ ಗಣೇಶ ಹೆಗಡೆ, |
| ಸಿದ್ದಾಪುರ ಪೋಲೀಸ್ ಠಾಣೆ. | | ವಯಸ್ಸು 38 ವರ್ಷ, ಪುರೋಹಿತ, |
| | | ವಾಸಃ ವಾಜಗೋಡ, ಸಿದ್ದಾಪುರ, |

## ಆಪಾದನೆ

**ಶ್ರೀ ಹರೀಶಕುಮಾರ ಎಮ್., ಬಿ.ಕಾಂ. ಎಲ್.ಎಲ್.ಬಿ..,** ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿದ್ದಾಪುರ ಆದ ನಾನು, ಆರೋಪಿತನಾದ ನಿನ್ನನ್ನು ಈ ಕೆಳಕಂಡ ಆಪಾದನೆಗೆ ಗುರಿಪಡಿಸುತ್ತೇನೆ.

ಮಾನ್ಯ ನ್ಯಾಯಾಲಯ ಹಾಗೂ ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಸಿದ್ದಾಪುರ ತಾಲೂಕಿನ ರಾಜ್ಯ ಹೆದ್ದಾರಿ ಸಂಖ್ಯೆ: 93 ನೇದರಲ್ಲಿ ಬರುವ ಅಕ್ಕುಂಜಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಂದೆ ಹಾದು ಹೋಗಿರುವ ರಸ್ತೆಯಲ್ಲಿ ಆರೋಪಿತನದಾ ನೀನು ದಿನಾಂಕ 12.02.2026 ರಂದು ರಾತ್ರಿ 09-30 ಗಂಟೆ ಸಮಯಕ್ಕೆ ನಿನ್ನ ವೇಗನಾರ ಕಾರ ನಂಬರ: ಕೆ.ಎ.-03/ಎಮ್.ಎಮ್-1941 ನೇದನ್ನು ಸಾಗರದಿಂದ ಸಿದ್ದಾಪುರ ಮಾರ್ಗವಾಗಿ ಅಕ್ಕುಂಜಿ ಶಾಲೆಯ ರಸ್ತೆಯ ಹತ್ತಿರ ಕಾರನ್ನು ರಸ್ತೆಯಲ್ಲಿ ತನ್ನ ಎಡಬದಿಗೆ ನಿಲ್ಲಿಸಿದ್ದು ನಂತರ ನೀನು ಒಮ್ಮಲೇ ಕಾರನು ಅತೀ ವೇಗ ಮತ್ತು ಅಜಾಗರುಕತೆಯಿಂದ ಕಾರನ್ನು ಮುಂದೆ ಚಲಾಯಿಸಿಕೊಂಡು ಬಂದು ಪಿರ್ಯಾದಿಯಾದ ಶ್ರೀ ಪುನೀತ ಪಾಂಡು ನಾಯ್ಕ ಹಾಗೂ ಶ್ರೀ ಶರತ್ ನಾರಾಯಣ ನಾಯ್ಕ ರವರ ಮೋಟಾರ ಸೈಕಲ್ ನಂಬರ:ಕೆ.ಎ.-31/ಇ.ಎಪ್-1954 ನೇದನ್ನು ಅಕ್ಕುಂಜಿಯಿಂದ ಸಿದ್ದಾಪುರ ಕಡೆಗೆ ಚಲಾಯಿಸಿಕೊಂಡು ಹೋಗುತ್ತಿರುವಾಗ ಮೋಟಾರ್ ಸೈಕಲ್‌ಗೆ ಹಿಂದಿನಿಂದ ಡಿಕ್ಕಿ ಪಡಿಸಿ ಅಪಘಾತ ಪಡಿಸಿ ಬೈಕ್‌ನ್ನು ರಸ್ತೆಯ ಮೇಲೆ ಬೀಳಿಸಿ ಬೈಕ್ ಚಲಾಯಿಸುತ್ತಿದ್ದ ಶರತ್ ನಾರಾಯಣ ನಾಯ್ಕ ಆತನಿಗೆ ತಲೆಗೆ, ಹೊಟ್ಟೆಗೆ ಹಾಗೂ ಬಲಭುಜಕ್ಕೆ ಗಾಯ ನೋವು ಪಡಿಸಿ ಹಾಗೂ ಬೈಕಿನ ಹಿಂಬದಿಯಲ್ಲಿ ಕುಳಿತಿದ್ದ ಪುನೀತ ಪಾಂಡು ನಾಯ್ಕ ಆತನಿಗೆ ಬಲಗಾಲಿನ ಮೊಣಕಾಲಿಗೆ ಹಾಗೂ ಬಲ ಪಾದದ ಹತ್ತಿರ ಗಾಯ ನೋವು ಪಡಿಸಿ ಬೈಕಿನ್ನು

ಜಖಂಗೊಳಿಸುವ ಆ ಮೂಲಕ  ಕಲಂ 281, 125(ಎ) ರ ಭಾರತೀಯ ನ್ಯಾಯ ಸಂಹಿತೆ-2023 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆರೋಪಿಸಲಾಗಿದೆ.

1. ಪ್ರಶ್ನೆಃ  ಈ ಮೇಲೆ ಓದಿ ಹೇಳಲಾದ ಆಪಾದನೆಯು ನಿನಗೆ ತಿಳಿಯಿತೇ?
ಉತ್ತರಃ

2. ಪ್ರಶ್ನೆಃ  ಆಪಾದನೆ ಯನ್ನು ಒಪ್ಪಿಕೊಳ್ಳುವಿಯೋ  ವಿಚಾರಣೆ ಬಯಸುವಿಯೋ?
ಉತ್ತರಃ

(ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಗಿ ಅವರು ಕೊಟ್ಟ ಉತ್ತರವನ್ನು ಅದೇ ರೀತಿ ದಾಖಲಿಸಿಕೊಳ್ಳಲಾಯಿತು ).

**ದಿನಾಂಕಃ** *04.06.2026*　　　　**ಪ್ರ.ದ.ನ್ಯಾ. ದಂಡಾಧಿಕಾರಿ, ಸಿದ್ದಾಪುರ .**